

ಪ್ರೊ ಕಬಡ್ಡಿ ಪಂದ್ಯದ ನೋಟ

ಆಕರ್ಷಣೆ ಎನಿಸಿದ್ದ ಜೀವಾ ಕುಮಾರ್, ಅನೂಪ್ ಕುಮಾರ್, ಮಂಜೀತ್ ಚಿಲ್ಲಾರ, ರಾಹುಲ್ ಚೌಧರಿ, ಸುಕೇಶ್ ಹೆಗ್ಡೆ ಹೀಗೆ ಅನೇಕ ಆಟಗಾರರು ಈಗ ಕಬಡ್ಡಿ ಮುಗಿಸಿದ್ದಾರೆ. ಕೆಲವರನ್ನು ಈಗ ತಂಡಗಳ ಕೋಚ್ ಆಗಿ ನೇಮಿಸಲಾಗಿದೆ. ಪ್ರದೀಪ್ ನರ್ವಾಲ್ ಆಡುತ್ತಿದ್ದರೂ ಪ್ರದರ್ಶನ ಮಟ್ಟ ಕುಸಿದಿದೆ ಎನ್ನುವುದು ಅವರ ಆಟದಿಂದಲೇ ಗೊತ್ತಾಗುತ್ತಿದೆ.

ಜೈಪುರ ಪಿಂಕ್ ಪ್ಯಾಂಥರ್ಸ್ ತಂಡ ಒಂಬತ್ತನೇ ಆವೃತ್ತಿಯಲ್ಲಿ ಚಾಂಪಿಯನ್ ಆಗಲು ಪ್ರಮುಖ ಪಾತ್ರ ವಹಿಸಿದ್ದ ರಾಹುಲ್ ಚೌಧರಿಯನ್ನು ಈ ಸಲದ ಹರಾಜಿನಲ್ಲಿ ಯಾವ ತಂಡಗಳೂ ಖರೀದಿಸಲಿಲ್ಲ. ರಾಷ್ಟ್ರೀಯ ಕಬಡ್ಡಿ ಟೂರ್ನಿಯಲ್ಲಿ ಉತ್ತರ ಪ್ರದೇಶ ತಂಡವನ್ನು ಮುನ್ನಡೆಸಿದ್ದ 30 ವರ್ಷದ ರಾಹುಲ್ ಚೌಧರಿ ಹಿಂದಿನ ಒಂಬತ್ತು ಆವೃತ್ತಿಗಳಿಂದ 150 ಪಂದ್ಯಗಳನ್ನಾಡಿದ್ದು 1,039 ರೈಡಿಂಗ್ ಅಂಕಗಳನ್ನು ಗಳಿಸಿದ್ದಾರೆ. ದೇಶದಲ್ಲಿ ಒಂದು ಸಾವಿರಕ್ಕಿಂತಲೂ ಹೆಚ್ಚು ರೈಡಿಂಗ್ ಮೂಲಕ ಅಂಕ ಗಳಿಸಿದ ಅಗ್ರ ನಾಲ್ಕು ಆಟಗಾರರ ಪಟ್ಟಿಯಲ್ಲಿದ್ದಾರೆ. ಆದರೂ ಕೆಲವೇ ವರ್ಷಗಳಲ್ಲಿ ಯಾವ ಫ್ರಾಂಚೈಸಿಗಳಿಗೂ ಅವರು ಬೇಡವಾಗಿದ್ದು ಅಚ್ಚರಿಯೇ. ಭಾರತ ತಂಡದಲ್ಲಿ ಆಡಿರುವ ವಿಶಾಲ್ ಭಾರದ್ವಾಜ್, ದೀಪಕ್ ಹೂಡಾ ಅವರನ್ನೂ ಯಾವ ತಂಡಗಳ ಮಾಲೀಕರು ಖರೀದಿ ಮಾಡಲಿಲ್ಲ.

ಒಂಬತ್ತನೇ ಆವೃತ್ತಿಯಲ್ಲಿ ತಮಿಳ್ ತಲೈವಾಸ್ ತಂಡದ ಪವನ್ ಸೆಹ್ರಾವತ್, ಪ್ರಪಂಜನ್, ಸುರೇಂದರ್ ನಾಡಾ, ಹೀಗೆ ಹಲವು ಪ್ರಮುಖ ಆಟಗಾರರು ಪದೇ ಪದೇ ಗಾಯಗೊಂಡರು. ಆಯಾ ಫ್ರಾಂಚೈಸಿಗಳು ಸಾಕಷ್ಟು ಹಣ ಸುರಿದರೂ ಅವರಿಗೆ ಅದಕ್ಕೆ ತಕ್ಕಹಾಗೆ ಪ್ರದರ್ಶನ ತೋರಲು ಸಾಧ್ಯವಾಗಲಿಲ್ಲ. ಪ್ರೊ ಕಬಡ್ಡಿಯಿಂದಾಗಿ ಗಾಯದ ಸಮಸ್ಯೆಯೇ ಆಟಗಾರರಿಗೆ ದೊಡ್ಡ ಹೊರೆಯಾಗುತ್ತದೆ.

## ಕಾರಣ ಏನು?

ಆಟಗಾರರು ಮೊದಲು ಮಣ್ಣಿನ ಅಂಕಣದಲ್ಲಿ ಸಾಂಪ್ರದಾಯಿಕವಾಗಿ ಕಬಡ್ಡಿ ಆಡುತ್ತಿದ್ದರು. ಅದಕ್ಕೆ ತಕ್ಕಂತೆ ಪೌಷ್ಟಿಕಾಂಶದ ಆಹಾರ, ಫಿಟ್‌ನೆಸ್ ತರಬೇತಿ ಇರುತ್ತಿತ್ತು. ಈಗ ಮ್ಯಾಟ್ ಮೇಲೆ ಆಡುತ್ತಿರುವುದು ಮತ್ತು ಆಟದ ನೈಜತೆಗಿಂತ ವ್ಯಾವಹಾರಿಕ ದೃಷ್ಟಿಕೋನವೇ ಆದ್ಯತೆಯಾಗಿರುವ ಕಾರಣ ಆಟಗಾರರು ಶ್ರೀಮಂತರಾದರೂ ಕ್ರೀಡೆ ಸೋಲುತ್ತಿದೆ. ಪ್ರೊ ಕಬಡ್ಡಿ ಆರಂಭವಾದ ವರ್ಷದಲ್ಲಿ ಹಲವು ಫ್ರಾಂಚೈಸಿಗಳು ತಮ್ಮ ರಾಜ್ಯಗಳಲ್ಲಿ ಗ್ರಾಮೀಣ ಭಾಗದಿಂದ ಪ್ರತಿಭಾ ಶೋಧ ನಡೆಸಿ ಸಮರ್ಥ ಆಟಗಾರರನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದವು. ಈಗ ಬಹುತೇಕ ತಂಡಗಳು ಪ್ರತಿಭಾ ಶೋಧ ನಿಲ್ಲಿಸಿವೆ.

ಈ ನಿಟ್ಟಿನಲ್ಲಿ ಪುಣೇರಿ ಪಲ್ಟನ್ ಪ್ರಯತ್ನ ಗಮನ ಸೆಳೆಯುತ್ತಿದೆ. ಈ ತಂಡ ಅಕಾಡೆಮಿ ಆರಂಭಿಸಿ ತರಬೇತಿ ನೀಡಿ ಅಸ್ಲಾಮ್ ಇನಾಮದಾರ್, ಮೋಹಿತ್ ಗೋಯತ್, ಆಕಾಶ ಶಿಂಧೆ ಮತ್ತು ಪಂಕಜ್ ಮೋಹಿತೆ ಅವರಂಥ ಪ್ರತಿಭಾನ್ವಿತರನ್ನು ಸ್ಪರ್ಧೆಗೆ ಅಣಿಮಾಡಿದೆ. ಹರಿಯಾಣ ಸ್ಟೀಲರ್ಸ್‌ನ ನವೀನ್ ಕುಂದು, ದಬಾಂಗ್ ಡೆಲ್ಲಿಯ ಹಿಮ್ಮತ್ ಅಂಟಿಲ್, ಪಿಂಕ್ ಪ್ಯಾಂಥರ್ಸ್‌ನ ಅಭಿಜಿತ್ ಮಲಿಕ್, ಪುಣೇರಿ ಪಲ್ಟನ್‌ನ ವೈಭವ ಕಾಂಬ್ಳೆ ಹೀಗೆ ತರುಣ ಆಟಗಾರರು ಗಮನ ಸೆಳೆಯುತ್ತಿದ್ದಾರೆ.

ಜಗತ್ತಿನಲ್ಲಿ ಕಬಡ್ಡಿ ಜನಪ್ರಿಯತೆ ಹೆಚ್ಚಿದಂತೆ ಒಲಿಂಪಿಕ್ಸ್‌ಗೆ ಅರ್ಹತೆ ಪಡೆದುಕೊಳ್ಳುವ ಮಾನದಂಡವೂ ಲಭಿಸುತ್ತದೆ ಎನ್ನುವ ವಿಶ್ಲೇಷಣೆ ಪಿಕೆಎಲ್ ಆರಂಭವಾದ ವರ್ಷದಲ್ಲಿತ್ತು. ಆದರೆ, ಈಗ ಅದರ ಬಗ್ಗೆ ಎಲ್ಲಿಯೂ ಚರ್ಚೆಯಿಲ್ಲ. ಸಂಘಟಕರಿಗೆ, ಪ್ರಸಾರದ ಹಕ್ಕು ಪಡೆದವರಿಗೆ ಪಿಕೆಎಲ್ ವ್ಯಾವಹಾರಿಕ ಉದ್ದೇಶವೇ ಪ್ರಧಾನವಾದಂತಿದೆ.

ಪಿಕೆಎಲ್‌ನಲ್ಲಿ ಹಲವು ವರ್ಷ ಕೋಚ್ ಆಗಿದ್ದ ಅಂತರರಾಷ್ಟ್ರೀಯ ಮಾಜಿ ಆಟಗಾರ ಬೆಂಗಳೂರಿನ ಸಿ. ಹೊನ್ನಪ್ಪ ಜೊತೆ ಇದರ ಬಗ್ಗೆ ಚರ್ಚಿಸಿದಾಗ – 'ಮರಗಳನ್ನು ಕತ್ತರಿಸಲಾಗುತ್ತಿದೆ, ಸಸಿಗಳನ್ನು ಬೆಳೆಸುತ್ತಿಲ್ಲ' ಎಂದು ಮಾರ್ಮಿಕವಾಗಿ ಹೇಳಿದ ಉತ್ತರದಲ್ಲಿಯೇ ಹಲವು ಪ್ರಶ್ನೆಗಳಿವೆ. ಇದೇ ಪ್ರಶ್ನೆಯನ್ನು ಜೀವಾ ಕುಮಾರ್ ಮುಂದಿಟ್ಟಾಗ 'ಶಕ್ತಿ ಹೀರಿದ ಮೇಲೆ ನಮಗೆ ಸಾಮರ್ಥ್ಯ ಬರುವುದಾದರೂ ಹೇಗೆ? ಶಕ್ತಿಯಿರುವ ತನಕ ಮಾತ್ರ ನಮ್ಮ ಆಟ' ಎಂದರು. ಅವರ ಈ ಮಾತು ವೇಗವಾಗಿ ಜನಪ್ರಿಯತೆಯ ಉತ್ತುಂಗಕ್ಕೆ ಏರಿದ ಪ್ರೊ ಕಬಡ್ಡಿ ಭವಿಷ್ಯದಲ್ಲಿ ಬೀರಬಹುದಾದ ಸುದೀರ್ಘ ಪರಿಣಾಮಕ್ಕೆ ಸಾಕ್ಷಿಯಂತಿದೆ.

ಪ್ರತಿಕ್ರಿಯಿಸಿ: feedback@sudha.co.in